“

**ಬರೆದೆ, ಬರೆದೆ;**
**ಕವಿತೆಯೇ ನಾನಾದೆ.**
**ನಾನೇ ಕವಿತೆಯಾದೆ.**



ಮಸಾರಿಗಳಲ್ಲಿ ತಿರುಗಾಡುವಾಗ ಒಬ್ಬನೇ ತೋಚಿದ್ದನ್ನು ಗುನುಗುತ್ತಿದ್ದೆ. ಒಬ್ಬನೇ ಮಾತನಾಡಿಕೊಳ್ಳುತ್ತಿದ್ದೆ. ದ್ವಿತೀಯ ಪಿ.ಯು.ಸಿ ಪರೀಕ್ಷೆಗೆ ಮುಧೋಳಕ್ಕೆ ಹೋದಾಗ ಬೆಳಗಿನ ಸೂರ್ಯೋದಯದ ಸಂದರ್ಭ. ಸುಂದರ ನಿಸರ್ಗದ ಮಡಿಲಲ್ಲಿ ನಾನು ಏನೋ ಬರೆದೆ. ಅದು ಕವಿತೆಯಾಯಿತು. ಅದು ಆಗಿದ್ದು ಕವಿ ಚಕ್ರವರ್ತಿ ರನ್ನನ ನಾಡಿನಲ್ಲಿ. ಗೆಳೆಯರೆಲ್ಲ ಮೆಚ್ಚಿದರು. ಗುರುಗಳು ಕವಿ ಎಂದರು. ಕವಿ ಎಂದ ಗುರುಗಳೇ ಹುಡುಗಿಯೊಬ್ಬಳ ಮುಂದೆ ನಿನಗೆ ಕವಿತೆ ಬರೆಯಲು ಬರುವುದಿಲ್ಲ, ಅವಳು ನೋಡು ಎಷ್ಟು ಚೆನ್ನಾಗಿ ಬರಿತಾಳೆ ಎಂದು ಹೇಳಿದ್ದು ಅವಮಾನಗೊಳಿಸಿತು. ಅದು ಅವಮಾನ ತಡೆದುಕೊಳ್ಳದ ವಯಸ್ಸು. ಅವಮಾನ ಸಾವಿಗಿಂತಲೂ ಹೆಚ್ಚು ಎಂದು ಭಾವಿಸಿದೆ. ಸಾವು ಒಮ್ಮೆ ಮಾತ್ರ ಬರುವಂಥದ್ದು. ಅವಮಾನ ಉಸಿರಿದ್ದಷ್ಟು ದಿನ ಕಟ್ಟಿಗೆ ಹುಳುವಾಗಿ ಕೊರೆಯುತ್ತಲೇ ಇರುತ್ತದೆ, ಅಲ್ಲವೇ? ಹೀಗಾಗಿ ಅವಮಾನದ ಸ್ಥಳದಲ್ಲಿಯೇ ಮತ್ತೆ ನನಗೆ ನನ್ನ ಗುರುಗಳು ಕವಿ ಎನ್ನಬೇಕೆಂದು ಹಟ ತೊಟ್ಟೆ. ಬರೆದೆ, ಬರೆದೆ; ಕವಿತೆಯೇ ನಾನಾದೆ. ನಾನೇ ಕವಿತೆಯಾದೆ. ಕೊನೆಗೆ ಆ ಹುಡುಗಿಯ ಎದುರೇ ನನ್ನ ಗುರುಗಳು ನೀನು ನಿಜವಾಗಿಯೂ ಕವಿ ಎಂದರು. ಬಹುಶಃ ಅವಮಾನ, ಹಸಿವು, ಸಂಕಟ, ತಲ್ಲಣ, ತಳಮಳವನ್ನು ಮರೆಯಲು ಓದಿದೆ. ದಕ್ಕಿದ ಅನುಭವಗಳನ್ನು ಅಪ್ಪ ಒಂದರ ಮೇಲೆ ಒಂದು ಕಲ್ಲು ಇಟ್ಟು ಗೋಡೆ ಕಟ್ಟಿದಂತೆ, ಅವ್ವ ಕೆಸರಿನಿಂದ ಗೋಡೆಯ ಮೇಲೆ ಆಳಿನ ಲೆಕ್ಕ ಬರೆದಂತೆ ನಾನು, ನನ್ನ, ನನ್ನವರ ಬೆನ್ನ ಹಿಂದಿನ ಮುಂದಿನ ಬವಣೆಗಳನ್ನು ಅಕ್ಷರದಲ್ಲಿ ದಾಖಲಿಸಿದೆ.

1985ರಲ್ಲಿ ನನ್ನ ‘ಕರಿ ನೆಲದ ಕಲೆಗಳು’ ಸಂಕಲನ ಪ್ರಕಟವಾಯಿತು. ಆಗಿನ್ನೂ ಸಂಬಳವಿರಲಿಲ್ಲ. ಪುಸ್ತಕ ಮಾರಲು ಸರ್ಕಾರಿ ಕಚೇರಿಗಳನ್ನು ಅಲೆದೆ. ಹೀಗೊಂದು ಕಚೇರಿಗೆ ಹೋಗಿ, ‘ಇವು ನಾ ಬರೆದ ಪುಸ್ತಕ, ಖರೀದಿಸಿ’ ಎಂದೆ. ಆ ಕಚೇರಿಯ ಸಾಹೇಬ, ‘ನೀ ಬರೆದ ಪುಸ್ತಕ ಖರೀದಿಸಬೇಕೆಂದು ಕಾನೂನು ಇದೆ ಏನು’ ಎಂದು ಕೊಂಕು ನುಡಿದ. ಇನ್ನೊಂದು ಕಚೇರಿಯಲ್ಲಿ ‘ನಿನ್ನ ಜಾತಿ ಯಾವುದು?’ ಎಂದು ಕೇಳಿದರು.

ಈ ಸಂದರ್ಭದಲ್ಲಿ ವಿಮರ್ಶಕ ಎಲ್.ಎಸ್. ಶೇಷಗಿರಿರಾವ್ ಅವರನ್ನು ನೆನಪಿಸಿಕೊಳ್ಳಲೇಬೇಕು. 1987ರ ಸುಮಾರಿಗೆ ಬಳ್ಳಾರಿಯಲ್ಲಿ ನಡೆದ